# ಪ್ರಕಟಣೆ

ಮೈಸೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಲ್ಲಿ ಖಾಲಿ ಇರುವ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಈ ಸಂಬಂಧ ನಿಗದಿಪಡಿಸಿರುವ ಮೀಸಲಾತಿ ವಿವರ, ವಿದ್ಯಾರ್ಹತೆ ಹಾಗೂ ವಯೋಮಿತಿ ವಿವರಗಳ ಬಗೆಗಿನ ಮಾಹಿತಿಯು ಮೈಸೂರು ಜಿಲ್ಲಾ ಪಂಚಾಯತ್ ಕಚೇರಿಯ ವೆಬ್‌ಸೈಟ್ ವಿಳಾಸ: https://mysore.nic.in/en/zilla-panchayat/ ದಲ್ಲಿ ಲಭ್ಯವಿದ್ದು, ಆಸಕ್ತರು online ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:30/10/2024ಆಗಿರುತ್ತದೆ. ಹೆಚ್ಚಿನ ವಿವರಗಳಿಗೆ ಮೇಲ್ಕಂಡ ವೆಬ್ ಸೈಟ್ ನಲ್ಲಿ ಪರಿಶೀಲಿಸಬಹುದಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಮೈಸೂರು.

https://www.freshersnow.com/

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು

Office of the Zilla Panchayath, Mysuru-570 005

ಇ-ಮೇಲ್: ceo_zp_mys@nic.in

ದೂರವಾಣಿ ಸಂಖ್ಯೆ: 0821-2526301, 330

ಸಂ: ಇಎಸ್‌ಟಿ (4)/ಗ್ರಂಥಾಲಯ/ನೇಮಕಾತಿ/2024-25

ದಿನಾಂಕ: 29.07.2024

# ಅಧಿಸೂಚನೆ

ವಿಷಯ: ಗ್ರಾಮ ಪಂಚಾಯತ್ ಗ್ರಂಥಾಲಯ ಮೇಲ್ವಿಚಾರಕ ಹುದ್ದೆ ನೇಮಕಾತಿಗೆ ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂ: RDPR/156/GPA/2022 (ಇ) ದಿನಾಂಕ 14.11.2022

* * *

ಗ್ರಾಮ ಪಂಚಾಯತ್ ಗ್ರಂಥಾಲಯ ಮೇಲ್ವಿಚಾರಕ ಹುದ್ದೆ ನೇಮಕಾತಿಗೆ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ರೂಪಿಸಿರುವ ನೇಮಕಾತಿ ನಿಯಮಗಳನ್ವಯ ಮೈಸೂರು ಜಿಲ್ಲೆಯಲ್ಲಿ ಖಾಲಿಯಿರುವ ಗ್ರಂಥಾಲಯ ಮೇಲ್ವಿಚಾರಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅದರಂತೆ ನಿಗದಿಪಡಿಸಿರುವ ಮೀಸಲಾತಿ ವಿವರ, ವಿದ್ಯಾರ್ಹತೆ, ವಾಸಸ್ಥಳದ ವಿವರ ಹಾಗೂ ವಯೋಮಿತಿ ವಿವರಗಳು ಈ ಕೆಳಕಂಡಂತಿದೆ.

**ನಿಗದಿಪಡಿಸಿರುವ ಮೀಸಲಾತಿ ವಿವರ:**

| ಕ್ರ. ಸಂ. | ಗ್ರಾಮ ಪಂಚಾಯಿತಿ ಹೆಸರು | ನಿಗದಿಪಡಿಸಿರುವ ಮೀಸಲಾತಿ |
|---|---|---|
| 1 | ಆಲನಹಳ್ಳಿ | ಪರಿಶಿಷ್ಟ ಜಾತಿ (ಇತರೆ) |
| 2 | ಆವರ್ತಿ | ಸಾಮಾನ್ಯ ಅರ್ಹತೆ (ಇತರೆ) |
| 3 | ಚಿಕ್ಕಬೀಚನಹಳ್ಳಿ | ಪರಿಶಿಷ್ಟ ಪಂಗಡ (ಇತರೆ) |
| 4 | ಚಿಲ್ಕುಂದ | ಸಾಮಾನ್ಯ ಅರ್ಹತೆ (ಮಹಿಳಾ ಅಭ್ಯರ್ಥಿ) |
| 5 | ದೊಡ್ಡಕಮರವಳ್ಳಿ | ಪ್ರವರ್ಗ-1 (ಇತರೆ) |
| 6 | ಗಾವಡಗೆರೆ | ಸಾಮಾನ್ಯ ಅರ್ಹತೆ (ಗ್ರಾಮೀಣ ಅಭ್ಯರ್ಥಿ) |
| 7 | ಹನಸೋಗೆ | ಪ್ರವರ್ಗ-2 (ಎ) (ಇತರೆ) |
| 8 | ಹರದನಹಳ್ಳಿ | ಸಾಮಾನ್ಯ ಅರ್ಹತೆ (ಅಂಗವಿಕಲ ಅಭ್ಯರ್ಥಿ) |
| 9 | ಹಿಟ್ನೆಹೆಬ್ಬಾಗಿಲು | ಪರಿಶಿಷ್ಟ ಜಾತಿ (ಮಹಿಳಾ ಅಭ್ಯರ್ಥಿ) |
| 10 | ಹೊಮ್ಮರಗಳ್ಳಿ | ಸಾಮಾನ್ಯ ಅರ್ಹತೆ (ಮಹಿಳಾ ಅಭ್ಯರ್ಥಿ) |
| 11 | ಹೊಸಹೊಳಲು | ಪ್ರವರ್ಗ-2 (ಬಿ) (ಇತರೆ) |
| 12 | ಇಟ್ನಾ | ಸಾಮಾನ್ಯ ಅರ್ಹತೆ (ಗ್ರಾಮೀಣ ಅಭ್ಯರ್ಥಿ) |
| 13 | ಕಡೇಮನುಗನಹಳ್ಳಿ | ಪ್ರವರ್ಗ-2 (ಎ) (ಮಹಿಳಾ ಅಭ್ಯರ್ಥಿ) |
| 14 | ಕಿರಂಗೂರು | ಸಾಮಾನ್ಯ ಅರ್ಹತೆ (ಇತರೆ) |
| 15 | ಕುಪ್ಪ್ಯಾ | ಪರಿಶಿಷ್ಟ ಜಾತಿ (ಗ್ರಾಮೀಣ ಅಭ್ಯರ್ಥಿ) |
| 16 | ಮೋದೂರು | ಸಾಮಾನ್ಯ ಅರ್ಹತೆ (ಮಹಿಳಾ ಅಭ್ಯರ್ಥಿ) |

https://www.freshersnow.com/

| ಕ್ರ. ಸಂ. | ಗ್ರಾಮ ಪಂಚಾಯಿತಿ ಹೆಸರು | ನಿಗದಿಪಡಿಸಿರುವ ಮೀಸಲಾತಿ |
|---|---|---|
| 17 | ಮುಂಜನಹಳ್ಳಿ | ಪ್ರವರ್ಗ-3 (ಎ) (ಇತರೆ) |
| 18 | ಎನ್.ಶೆಟ್ಟಿಹಳ್ಳಿ | ಪರಿಶಿಷ್ಟ ಪಂಗಡ (ಮಹಿಳಾ ಅಭ್ಯರ್ಥಿ) |
| 19 | ಪಡುಕೋಟೆಕಾವಲ್ | ಪ್ರವರ್ಗ-3 (ಬಿ) (ಇತರೆ) |

**ವಿದ್ಯಾರ್ಹತೆ:**

ದ್ವಿತೀಯ ಪದವಿ ಪೂರ್ವ ಪರೀಕ್ಷೆ (ಪಿ.ಯು.ಸಿ) ಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಸರ್ಟಿಫಿಕೇಷನ್ ಕೋರ್ಸ್ ಇನ್ ಲೈಬ್ರರಿ ಸೈನ್ಸ್‌ನಲ್ಲಿ ಪ್ರಮಾಣ ಪತ್ರ ಪಡೆದಿರತಕ್ಕದ್ದು ಹಾಗೂ ಕನಿಷ್ಟ ಮೂರು ತಿಂಗಳ ಕಂಪ್ಯೂಟರ್ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು.

**ವಾಸಸ್ಥಳ:**

ಗ್ರಾಮ ಪಂಚಾಯತ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸಂಬಂಧಪಟ್ಟ ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವಾಸಿಯಾಗಿರತಕ್ಕದ್ದು.

ಸಂಬಂಧಪಟ್ಟ ಗ್ರಾಮ ಪಂಚಾಯತ್ ವ್ಯಾಪ್ತಿಯ ನಿವಾಸಿಯ ಲಭ್ಯತೆ ಇಲ್ಲದೇ ಇದ್ದಲ್ಲಿ ಆಯಾ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿನ ಬೇರೆ ಗ್ರಾಮ ಪಂಚಾಯತ್ ಅಭ್ಯರ್ಥಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದು.

**ವಯೋಮಿತಿ:**

1. ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಹದಿನೆಂಟು ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿಯು ಈ ಕೆಳಕಂಡಂತೆ ಇರತಕ್ಕದ್ದು.

| | | |
|---|---|---|
| ಎ | ಸಾಮಾನ್ಯ ವರ್ಗ | 35 ವರ್ಷ |
| ಬಿ | 2ಎ, ಎಬಿ, 3ಎ, 3ಬಿ | 38 ವರ್ಷ |
| ಸಿ | ಪ.ಜಾತಿ/ಪ.ಪಂಗಡ/ಪ್ರ-1 | 40 ವರ್ಷ |

ಮೇಲ್ಕಂಡಂತೆ ಅರ್ಜಿಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬುಲೇಯಾರ್ಡ್ ರಸ್ತೆ, ಚಾಮರಾಜಪುರಂ, ಮೈಸೂರು ರವರ ಕಚೇರಿಯ ವೆಬ್ ಸೈಟ್ ವಿಳಾಸದಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 30/10/2024 ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪಂಚಾಯತ್, ಮೈಸೂರು ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಕಚೇರಿ ವೆಬ್‌ಸೈಟ್ ವಿಳಾಸ: https://mysore.nic.in/en/zilla-panchayat/

30/1/20

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ಮೈಸೂರು

ಪ್ರತಿ: ನಾಮಫಲಕಕ್ಕೆ / ಪತ್ರಿಕಾ ಪ್ರಕಟಣೆಗಾಗಿ.

https://www.freshersnow.com/